ರೂ. 25/-

# ಧ್ಯಾನ ಕಸ್ತೂರಿ

ಹೊಸ ಯುಗದ ಆಧ್ಯಾತ್ಮಿಕ ಮಾಸ ಪತ್ರಿಕೆ ಜುಲೈ 2009



**2012ರ ಹೊತ್ತಿಗೆ ಇಡೀ ಜಗತ್ತನ್ನು ಆಧ್ಯಾತ್ಮೀಕರಿಸೋಣ**



ಪಿರಮಿಡ್ ವ್ಯಾಲಿಯಲ್ಲಿ ಪತ್ರೀಜಿ ಕಾರ್ಯಕ್ರಮ



ಪಿರಮಿಡ್ ವ್ಯಾಲಿಯಲ್ಲಿ ಪತ್ರೀಜಿ ಕಾರ್ಯಕ್ರಮ



ಗುಲ್ಬರ್ಗಾ ಜಿಲ್ಲೆಯಲ್ಲಿ ಪಿರಮಿಡ್ ಕಛೇರಿ ಉದ್ಘಾಟನೆ



ಗುಲ್ಬರ್ಗಾದಲ್ಲಿ ಧ್ಯಾನ ತರಗತಿ



ಧ್ಯಾನ ಯೋಗಿ ಪ್ರಶಸ್ತಿ ಕಾರ್ಯಕ್ರಮ, ಬೆಂಗಳೂರು



ಧ್ಯಾನ ಯೋಗಿ ಪ್ರಶಸ್ತಿ ಕಾರ್ಯಕ್ರಮ, ಬೆಂಗಳೂರು

# ಪತ್ರೀಜಿ ವಾಣಿ



‘‘ಯಶಸ್ಸು ಆಲೋಚನಾ ಶಕ್ತಿಯನ್ನು ಅವಲಂಬಿಸಿದೆ. ಯುಗ ಯುಗಗಳಿಂದ ಮಾಸ್ಟರ್‌ಗಳು ಇದನ್ನೇ ಹೇಳುತ್ತಿದ್ದಾರೆ. ಇಲ್ಲಿ ನಾವು ಹೇಳುತ್ತಿರುವುದರಲ್ಲಿ ಹೊಸದೇನೂ ಇಲ್ಲ, ನಾವು ಈಗ ಕೇಳುತ್ತಿರುವುದರಲ್ಲಿ ಹೊಸದೇನೂ ಸಹ ಇಲ್ಲ’’

‘‘ಏಸು ಕ್ರಿಸ್ತ ಹೇಳಿದ್ದೂ ಅದೇ ಸತ್ಯ!
ಬುದ್ಧ ಹೇಳಿದ್ದೂ ಸಹ ಅದೇ ಸತ್ಯ!
ಕೃಷ್ಣ ಹೇಳಿದ ಸತ್ಯವೂ ಅದೇ ಆಗಿದೆ!
ಮಹಮದ್ ಹೇಳಿದ ಸತ್ಯವೂ ಬೇರೆಯಲ್ಲ, ಅದೂ ಅದೇ ಸತ್ಯ!’’

‘‘ಆದರೂ, ಈ ಪರಿಕಲ್ಪನೆಗಳೊಂದಿಗೆ ಸಂಪರ್ಕಗೊಳ್ಳಲು ನಾವು ಈಗಲೂ, ಇಂದಿಗೂ ಆಸಕ್ತಿ ತೋರಿಸುತ್ತಿಲ್ಲ; ಈ ಪರಿಕಲ್ಪನೆಗಳೊಂದಿಗೆ ನಾವು ಬದುಕುತ್ತಿಲ್ಲ; ಈ ಪರಿಕಲ್ಪನೆಯನ್ನು ನಾವು ಅನುಷ್ಠಾನಕ್ಕೆ ತಂದಿಲ್ಲ’’

‘‘ನಾವು ನಮ್ಮ ಮನಸ್ಸನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ, ಆದ್ದರಿಂದ, ನಾವು ನಮ್ಮ ಜೀವನವನ್ನು ನಿಯಂತ್ರಿಸಲು ಸಮರ್ಥರಾಗಿಲ್ಲ!. ನಮ್ಮ ಮನಸ್ಸನ್ನು ನಿಯಂತ್ರಿಸಲು,.... ನಮ್ಮ ಮನಸ್ಸಿಗೆ ಸೂಕ್ತವಾದ ಆಕಾರವನ್ನು ನೀಡಲು,.... ನಮ್ಮ ಮನಸ್ಸಿಗೆ ಒಂದು ಮಾರ್ಗವನ್ನು ತೋರಲು,... ನಾವು ಗಂಭೀರವಾಗಿ, ಪ್ರಾಮಾಣಿಕವಾಗಿ ಹಲವು ಕ್ಷಣಗಳನ್ನು ವ್ಯಯಿಸಿದರೆ.... ಆಗಲೇ ನಮ್ಮ ನಿಜವಾದ ಜೀವನದ ಕುರಿತಾಗಿ ನಾವು ಕಾಳಜಿವಹಿಸಿದ್ದೇವೆ, ನಮ್ಮ ಜೀವನದ ಉಸ್ತುವಾರಿ ಮಾಡುತ್ತಿದ್ದೇವೆ ಎನ್ನಬಹುದು.’’

ನಮ್ಮ ಜೀವನವು ನಮ್ಮ ಮನಸ್ಸುಗಳ ಮೇಲೆ ಅವಲಂಬಿಸಿದೆ.

‘‘ನಮ್ಮ ಮನಸ್ಸು ಹೇಗಿದೆಯೋ.. ಹಾಗೆಯೇ ನಮ್ಮ ಜೀವನವು ಸಹ ಇರುತ್ತದೆ. ಏನೇನಾಗಬೇಕು, ಹೇಗಿರಬೇಕು ಎಂದು ಬಯಸಿ, ನಾವು ಇದುವರೆವಿಗೂ ಏನನ್ನು ಉದ್ದೇಶಿಸಿದ್ದೇವೋ ಹಾಗೆಯೇ, ಅವೆಲ್ಲವುಗಳ ಒಟ್ಟು ಮೊತ್ತದಂತೆ ನಮ್ಮ ಜೀವನವು ಇರುತ್ತವೆ; ಮತ್ತು ನಾವು ಏನನ್ನು ಉದ್ದೇಶಿಸುತ್ತಿದ್ದೇವೆಯೋ ಅದೆಲ್ಲವೂ....!’’

‘‘ನಮ್ಮ ಮನಸ್ಸು ಹೇಗಿರುತ್ತದೆ ಎಂಬ ಒಂದು ಅಂಶದ ಮೇಲೆಯೇ ಪ್ರತಿಯೊಂದೂ ಸಹ ಸ್ಪಷ್ಟವಾಗಿ ಅವಲಂಬಿಸಿದೆ!. ‘‘ಬಹಿರಂಗವಾಗಿ ಹೊರಗೆ ಕಾಣಿಸುತ್ತಿರುವುದು ಒಳಗಡೆಯೇ ಅಂತರಂಗದಲ್ಲಿ ರೂಪುಗೊಂಡಿರುತ್ತದೆ’ ಎಂಬ ನಿಯಮವನ್ನು ನಾವು ಅರ್ಥಮಾಡಿಕೊಳ್ಳಬೇಕು. ಉದ್ದೇಶದ ಪರಿಶುದ್ಧತೆಯನ್ನು ಅನುಸರಿಸಿ ಅಂತರಂಗವು ತಾನಾಗಿಯೇ ಸಾಕಾರಗೊಳ್ಳುತ್ತದೆ, ಪರಿಶುದ್ಧ ಆಲೋಚನೆಯ ಮೂಲಕ ಅಂತರಂಗವು ಬಹಿರಂಗವಾಗಿ ಸಾಕಾರಗೊಳ್ಳುತ್ತದೆ. ಆಗಲೇ ನಾವು ಮಾಸ್ಟರ್‌ಗಳಾಗಿ ಹೊರಹೊಮ್ಮುತ್ತೇವೆ,... ನಮ್ಮ ಜೀವನದ ನಿಜವಾದ ಅರ್ಥವನ್ನು ಸೃಷ್ಟಿಸುತ್ತೇವೆ... ನಮ್ಮ ಜೀವನದಲ್ಲಿ ಸೌಂದರ್ಯವನ್ನು ಸೃಷ್ಟಿಸುತ್ತೇವೆ.’’

# ಧ್ಯಾನ ಕಸ್ತೂರಿ

ಸಂಸ್ಥಾಪಕರು :
ಬ್ರಹ್ಮರ್ಷಿ ಸುಭಾಷ್ ಪತ್ರೀಜಿ

ಸಂಪಾದಕರು : ಶ್ರೀ ಎ. ಸತ್ಯನಾರಾಯಣ

**ಸಂಪಾದಕ ಮಂಡಳಿ**
ಶ್ರೀ ಭೀಮೇಶ್ ರೆಡ್ಡಿ, ಬೆಂಗಳೂರು
ಡಾ॥ ಉಷಾರಾಣಿ, ಮೈಸೂರು
ಶ್ರೀ ಲಕ್ಷ್ಮಿನಾರಾಯಣ, ಬೆಂಗಳೂರು
ಶ್ರೀ ಬಿ. ಶಿವರಾಮಪ್ಪ, ಬೆಂಗಳೂರು

ನಿರ್ವಾಹಕರು : ಶ್ರೀ ತಿಮ್ಮರಾಜು

**ಸಲಹಾ ಮಂಡಳಿ**
ಶ್ರೀ ಪಿ. ಚಂದ್ರಶೇಖರ್, ಬೆಂಗಳೂರು
ಶ್ರೀ ಬಿ.ವಿ. ರೆಡ್ಡಿ, ಬೆಂಗಳೂರು
ಶ್ರೀಮತಿ ಗಿರಿಜಾ ರಾಜನ್, ಕೋಯಂಬತ್ತೂರು
ಶ್ರೀ ನಾಗಿರೆಡ್ಡಿ, ಬಳ್ಳಾರಿ
ಶ್ರೀ ಪಿ. ರಾಜಶೇಖರ್, ಬೆಂಗಳೂರು

**ಮಾರಾಟ ಸಹಾಯಕ ಮಂಡಳಿ**
1. ಶ್ರೀಮತಿ ಸರಳ, ಬೆಂಗಳೂರು
2. ಶ್ರೀಮತಿ ನಿರ್ಮಲ, ಬೆಂಗಳೂರು
3. ಶ್ರೀಮತಿ ಸಂಧ್ಯ, ಬೆಂಗಳೂರು
4. ಶ್ರೀ ಚಂದ್ರಮೋಹನ್, ಬೆಂಗಳೂರು
5. ಶ್ರೀ ಕೃಷ್ಣ ಬೆಂಗಳೂರು

**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ.)**
ನಂ. 126, 2ನೇ ಮಹಡಿ, 7ನೇ ಮುಖ್ಯ ರಸ್ತೆ, 4ನೇ ಬಡಾವಣೆ,
ಪೋಲೀಸ್ ಠಾಣೆ ಎದುರು, ಜಯನಗರ, ಬೆಂಗಳೂರು - 560 011
ದೂರವಾಣಿ : 9901050166, 94481 40198, 99725 82110

www.pssmovement.org

## ಪರಿವಿಡಿ

ಪತ್ರೀಜಿ ವಾಣಿ .................... 1
ಪರಿವಿಡಿ .................... 2
ಸಂಪಾದಕೀಯ .................... 3
ಏಕತಾ ಧ್ಯಾನ .................... 4
ಧ್ಯಾನದ ಪ್ರಕ್ರಿಯೆ ....................5
ಧ್ಯಾನದ ಪ್ರಯೋಜನಗಳು .................... 6
ಟೋಲ್‌ಟೆಕ್ 3ನೇ ಒಪ್ಪಂದ .................... 9
ಶ್ರೀ ಸದಾನಂದ ಯೋಗಿ ....................12
ವಿಲೇಜ್ ಟು ವ್ಯಾಲಿ .................... 15
ಭೀಮೇಶ್ ಕಲಂ ಟು ಕಾಲಂ .................... 19
ಓಶೋ ಕಥೆಗಳು .................... 22
ಸಾಹಸ .................... 23
ಪಿರಮಿಡ್ - ಅದರ ಉಪಯೋಗಗಳು ....... 29
ಸಸ್ಯಹಾರೀ ಜೀವನ ಕ್ರಮ .................... 31
ಪುಸ್ತಕ ಪರಿಚಯ .................... 33
ಧ್ಯಾನ ಯೋಗಿ ಪ್ರಶಸ್ತಿ .................... 34
ಗುಲ್ಬರ್ಗಾ ಜಿಲ್ಲಾ ಕೇಂದ್ರ ಪ್ರಾರಂಭೋತ್ಸವ ... 35
ಉಪನಿಷತ್ತುಗಳಲ್ಲಿ ಏನಿದೆ? .................... 37
ಬ್ರಹ್ಮಜ್ಞಾನ .................... 38
ಧ್ಯಾನವೇಮನ ವಿಶ್ವಗೀತೆ .................... 39
ಧ್ಯಾನಾನುಭವ .................... 40
ಸಿನಿಮಾ .................... 44
ಮುಗುಳ್ನಗೆ .................... 45

For any queries and suggestions
Email : dhyanakasturi@gmail.com

# ಸಂಪಾದಕೀಯ

ಎ.ಸತ್ಯನಾರಾಯಣ
ವಿಳಾಸ: ನಂ.958, 2ಜಿ ಕ್ರಾಸ್, 1ನೇ ಬ್ಲಾಕ್
ಹೆಚ್.ಆರ್.ಬಿ.ಆರ್. ಬಡಾವಣೆ
ಕಲ್ಯಾಣನಗರ, ಬೆಂಗಳೂರು 560 043
ದೂ: 080-25427145, 9448883872
ಇ-ಮೇಯ್ಲ್; sathyaasn@gmail.com



ಪ್ರಿಯ ಧ್ಯಾನಿಗಳೇ, ನಮಸ್ಕಾರ.

ಬೆಂಗಳೂರು ಪಿರಮಿಡ್ ಸ್ಪಿರಿಚುಯಲ್ ಸೊಸೈಟಿ (ರಿ) ಎಂಬುದನ್ನು, ಈಗ, ಕರ್ನಾಟಕ ಧ್ಯಾನ ಪ್ರಚಾರ ಟ್ರಸ್ಟ್ (ರಿ) ಎಂದು ಮರುನಾಮಕರಣಗೊಳಿಸಲಾಗಿದೆ. ಹಾಗೂ, ಧ್ಯಾನ ಪ್ರಚಾರವನ್ನು ವ್ಯವಸ್ಥಿತ ರೀತಿಯಲ್ಲಿ ಕರ್ನಾಟಕದಾದ್ಯಂತ ವಿಸ್ತರಿಸಲು ಉದ್ದೇಶಿಸಲಾಗಿದೆ. ಇದರ ಅಂಗವಾಗಿ ಗುಲಬರ್ಗಾದಲ್ಲಿ, ಧ್ಯಾನಪ್ರಚಾರಕ್ಕಾಗಿ, ಮೊದಲ ಜಿಲ್ಲಾ ಕೇಂದ್ರವನ್ನು ಆರಂಭಿಸಲಾಗಿದೆ. ಇದರ ವರದಿಯೊಂದು ಈ ಸಂಚಿಕೆಯಲ್ಲಿದೆ. ಪತ್ರೀಜಿಯವರ ಸಾಹಿತ್ಯದೊಂದಿಗೆ, ಉತ್ತಮವಾದ ಮತ್ತು ಕುತೂಹಲಭರಿತ ಹಲವು ವಿಷಯಗಳ ಲೇಖನಗಳು ಈ ಸಂಚಿಕೆಯಲ್ಲಿ ಇವೆ. ಧ್ಯಾನ ಕಸ್ತೂರಿಯ ವಿನ್ಯಾಸವನ್ನು ಮತ್ತು ಅದರ ವಿಷಯವೈವಿಧ್ಯವನ್ನು ಉತ್ತಮಗೊಳಿಸುವ ಹಲವಾರು ಪ್ರಯತ್ನಗಳು ಮುಂದುವರೆದಿರುವುದನ್ನು ನೀವು ಗಮನಿಸಿರಬಹುದು. ಇನ್ನೂ ಹೆಚ್ಚಿನ ಸುಧಾರಣೆಯು ಆಗಬೇಕಾಗಿದೆ.

ಬ್ರಹ್ಮರ್ಷಿ ಪತ್ರೀಜಿಯವರು ಪ್ರತೀ ತಿಂಗಳ ಮೊದಲ ಮೂರುದಿನಗಳ ಕಾಲ ಬೆಂಗಳೂರು ಮತ್ತು ಪಿರಮಿಡ್ ವ್ಯಾಲಿಯಲ್ಲಿ ತಮ್ಮ ಕಾರ್ಯಚಟುವಟಿಕೆಗಳನ್ನು ನಿಯಮಿತಗೊಳಿಸಿದ್ದಾರೆ. ಇದರಿಂದಾಗಿ, ಬೆಂಗಳೂರು ಮತ್ತು ಕರ್ನಾಟಕದ ಇತರೆಡೆಗಳ ಪಿರಮಿಡ್ ಮಾಸ್ಟರ್‌ಗಳು ಪತ್ರೀಜಿಯವರನ್ನು ಸಂದರ್ಶಿಸಲು ಉತ್ತಮ ಅವಕಾಶವಾಗಿದೆ. ಕರ್ನಾಟಕದ ವಿವಿಧ ಪ್ರದೇಶಗಳಿಂದ ಪಿರಮಿಡ್ ವ್ಯಾಲಿಯನ್ನು ಸಂದರ್ಶಿಸುವ ಮತ್ತು ಪತ್ರೀಜಿಯವರನ್ನು ಭೇಟಿ ಮಾಡುವ ಬಯಕೆ ಇರುವ ಎಲ್ಲರಿಗೂ ಸಹ ಸಿಹಿ-ಸುದ್ದಿಯೊಂದು ಇಲ್ಲಿದೆ. ಕರ್ನಾಟಕ ಧ್ಯಾನ ಪ್ರಚಾರ ಟ್ರಸ್ಟ್ ವತಿಯಿಂದ ಹಳ್ಳಿಯಿಂದ ವ್ಯಾಲಿಗೆ (ವಿಲೇಜ್ ಟು ವ್ಯಾಲಿ) ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದರ ವಿವರಗಳು ಈ ಸಂಚಿಕೆಯಲ್ಲಿವೆ. ಹಾಗೆಯೇ, ಪಿರಮಿಡ್ ಸ್ಪಿರಿಚುಯಲ್ ಟ್ರಸ್ಟ್ ಈಗಾಗಲೇ ಪಿರಮಿಡ್ ವ್ಯಾಲಿಯಲ್ಲಿ ಹಲವು ಸೌಲಭ್ಯಗಳನ್ನು ಕಲ್ಪಿಸಿದ್ದು, ಹೆಚ್ಚಿನ ಸೌಲಭ್ಯವನ್ನು ಧ್ಯಾನಿಗಳಿಗೆ ನೀಡುವ ಉದ್ದೇಶ ಹೊಂದಿದೆ. ಇದಕ್ಕಾಗಿ, ದಾನಿಗಳು ಉದಾರವಾಗಿ ಕೊಡುಗೆಗಳನ್ನು ನೀಡುವ ಮೂಲಕ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕಾಗಿದೆ. ಕರ್ನಾಟಕದ ಪಿರಮಿಡ್ ಮಾಸ್ಟರ್‌ಗಳು ಎಲ್ಲರೂ ಸಹ ಕರ್ನಾಟಕ ಧ್ಯಾನ ಪ್ರಚಾರ ಟ್ರಸ್ಟ್‌ನ ಆಜೀವ ಸದಸ್ಯರಾಗುವ ಮೂಲಕ, ಧ್ಯಾನ ಪ್ರಚಾರದ ಸಂಘಟಿತ ಪ್ರಯತ್ನಕ್ಕೆ ತಮ್ಮ ಬೆಂಬಲವನ್ನು ನೀಡುತ್ತಾರೆ ಎಂದು ಆಶಿಸಲಾಗಿದೆ. ವಂದನೆಗಳು.

# ಧ್ಯಾನ ಕಸ್ತೂರಿ ಪತ್ರಿಕೆಯ ಹಿನ್ನೆಲೆ

ಪಿರಮಿಡ್ ಸ್ಪಿರಿಚುಯಲ್ ಸೊಸೈಟಿ ಮೂವ್‌ಮೆಂಟ್‌ನ್ನು ಸಂಸ್ಥಾಪಿಸಿದವರು ಬ್ರಹ್ಮರ್ಷಿ ಪತ್ರೀಜಿಯವರು. ಇದು, ಈ ಭೂಮಿಯ ಮೇಲಿನ, ಪ್ರಸ್ತುತ ಕಾಲದ, ಹೊಸಯುಗದ ಒಂದು ಪ್ರಮುಖ ಆಂದೋಳನವಾಗಿದೆ.

ಪ್ರಪ್ರಥಮ ಬಾರಿಗೆ, ಧ್ಯಾನ ಎಂಬುದು ಗ್ರಾಮೀಣ ಪ್ರದೇಶದ ಜನಸಮುದಾಯಕ್ಕೆ ಮತ್ತು ನಗರದ ಶ್ರೀಮಂತ ವರ್ಗಕ್ಕೆ ಅತ್ಯಂತ ವೈಜ್ಞಾನಿಕವಾದ ರೀತಿಯಲ್ಲಿ ಲಭಿಸುತ್ತಿದೆ. ಪ್ರಪ್ರಥಮ ಬಾರಿಗೆ, ಪಿರಮಿಡ್ ಶಕ್ತಿಯನ್ನು ಧ್ಯಾನದೊಂದಿಗೆ ವಿಸ್ತೃತ ರೀತಿಯಲ್ಲಿ ಸಂಯೋಜಿಸಲಾಗಿದೆ.

ಆಧ್ಯಾತ್ಮಿಕತೆಯ ಜಾಗತೀಕರಣದ ಮಹತ್ವದ ಕಾರ್ಯಕ್ಕಾಗಿ, ಪತ್ರೀಜಿಯವರಿಂದ ವಿಶೇಷವಾಗಿ ತರಬೇತಿ ಪಡೆದಿರುವ ಪಿರಮಿಡ್ ಮಾಸ್ಟರ್‌ಗಳು, ತಮ್ಮನ್ನು ತಾವು ಸಂಪೂರ್ಣವಾಗಿ ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಸಸ್ಯಾಹಾರೀ ಜೀವನ ಕ್ರಮದ ತತ್ವಗಳನ್ನು ಆನಾಪಾನಸತಿ ಧ್ಯಾನ ವಿಜ್ಞಾನವನ್ನು, ಪಿರಮಿಡ್ ಮಾಸ್ಟರ್‌ಗಳು, ಯುದ್ಧೋಪಾದಿಯಲ್ಲಿ ಭಾರತದ ಮೂಲೆ ಮೂಲೆಗಳಿಗೆ ತಲುಪಿಸುತ್ತಿದ್ದಾರೆ.

ಬ್ರಹ್ಮರ್ಷಿ ಪತ್ರೀಜಿಯವರು 1947ರಲ್ಲಿ ಆಂಧ್ರಪ್ರದೇಶ ರಾಜ್ಯದಲ್ಲಿ ಜನಿಸಿದರು. ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು, 1975ರಲ್ಲಿ ಬಹುರಾಷ್ಟ್ರೀಯ ರಸಗೊಬ್ಬರದ ಕಂಪನಿಯೊಂದರಲ್ಲಿ ಉದ್ಯೋಗಕ್ಕೆ ಸೇರಿದರು. ಧ್ಯಾನ ಕುರಿತ ಹಲವಾರು ಗಹನವಾದ ಪ್ರಯೋಗಗಳನ್ನು ಮಾಡಿದ ನಂತರ, ಪತ್ರೀಜಿಯವರಿಗೆ 1979ರಲ್ಲಿ ಜ್ಞಾನೋದಯವಾಯಿತು. ಅಲ್ಲಿಂದಾಚೆಗೆ, ಪ್ರತಿಯೊಬ್ಬ ವ್ಯಕ್ತಿಯೂ ಸಹ ಜ್ಞಾನೋದಯ ಪಡೆಯಬೇಕು ಎಂಬ ಆಶಯದೊಂದಿಗೆ ಮತ್ತು ಈ ಕುರಿತು ಪ್ರತಿಯೊಬ್ಬರನ್ನೂ ಎಚ್ಚರಿಸಲು ಅವರು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಹೊಸಯುಗದ ಆಧ್ಯಾತ್ಮಿಕತೆ ಕುರಿತಂತೆ ಅರವತ್ತಕ್ಕೂ ಹೆಚ್ಚಿನ ಸಂಖ್ಯೆಯ ಮಹತ್ವದ ಪುಸ್ತಕಗಳನ್ನು ಪತ್ರೀಜಿಯವರು ರಚಿಸಿದ್ದಾರೆ. ಬಹುತೇಕ ಪುಸ್ತಕಗಳು ತೆಲುಗಿನಲ್ಲಿವೆ . ಅಲ್ಲದೆ, ಆಧುನಿಕವಾದ, ವಿವಿಧ ಆಧ್ಯಾತ್ಮಿಕ ವಿಷಯಗಳ ಕುರಿತು ಹಲವಾರು ಆಡಿಯೋ ಮತ್ತು ವಿಡಿಯೋ ಸೀಡಿಗಳು ಹಾಗೂ ಡಿವಿಡಿಗಳನ್ನು ಹೊರತಂದಿದ್ದಾರೆ. ಇವರು ರಚಿಸಿರುವ ಆಧ್ಯಾತ್ಮಿಕ ವಿಜ್ಞಾನದ ಸಾಹಿತ್ಯವನ್ನು, ನಿಯತಕಾಲಿಕೆಗಳು, ಪತ್ರಿಕೆಗಳು, ಪುಸ್ತಕಗಳು, ಆಡಿಯೋ ಮತ್ತು ವಿಡಿಯೋ ಸೀಡಿಗಳ ರೂಪದಲ್ಲಿ, ಹಲವಾರು ಭಾಷೆಗಳಲ್ಲಿ, ಹೊರತರಲಾಗಿದೆ. ವಿಶ್ವದ ಇತರೆ ಮಾಸ್ಟರ್‌ಗಳು ರಚಿಸಿರುವ ಉತ್ತಮ ಆಧ್ಯಾತ್ಮಿಕ ಕೃತಿಗಳ ಅನುವಾದವನ್ನು, ವಿವಿಧ ಭಾಷೆಗಳು, ಅಂದರೆ, ಕನ್ನಡ ತೆಲುಗು, ಹಿಂದಿ, ತಮಿಳು ಇತ್ಯಾದಿ ಭಾಷೆಗಳಿಗೆ ಅನುವಾದಿಸುವುದನ್ನು ಇವರ ಮಾರ್ಗದರ್ಶನದಲ್ಲಿ, ಕೈಗೊಳ್ಳಲಾಗಿದೆ. ಪತ್ರೀಜಿಯವರ ಮಾರ್ಗದರ್ಶನದಲ್ಲಿ ಹಲವಾರು ನಿಯತಕಾಲಿಕೆಗಳನ್ನು ಪ್ರಕಟಿಸಲಾಗುತ್ತಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಸ್ಪಿರಿಚ್ಯುಯಲ್ ಇಂಡಿಯಾ (ಇಂಗ್ಲಿಷ್), ಧ್ಯಾನಾಂಧ್ರಪ್ರದೇಶ್ (ತೆಲುಗು), ಧ್ಯಾನ ತಮಿಳುನಾಡು (ತಮಿಳು), ಧ್ಯಾನಕೈರಳಿ (ಮಲೆಯಾಳಂ), ಧ್ಯಾನ ಭಾರತಿ (ಹಿಂದಿ).

ಅಕ್ಟೋಬರ್ 2004ರಲ್ಲಿ, ''ಧ್ಯಾನಕರ್ನಾಟಕ'' ಎಂಬ ಪತ್ರಿಕೆಯ ಪ್ರಕಟಣೆಯ ಆರಂಭದಿಂದ, ಕನ್ನಡ ಆಧ್ಯಾತ್ಮಿಕ ಪತ್ರಿಕೆಯನ್ನು ಹೊರತರುವ ಪತ್ರೀಜಿಯವರ ಕನಸು ನನಸಾಯಿತು. ನಂತರದಲ್ಲಿ, ಪತ್ರಿಕೆಗೆ ''ಧ್ಯಾನ ಕಸ್ತೂರಿ'' ಎಂದು ಮರುನಾಮಕರಣ ಮಾಡಲಾಯಿತು.

ಹೊಸಯುಗದ ಪರಿಕಲ್ಪನೆಗಳೊಂದಿಗೆ ಪ್ರಕಟಗೊಳ್ಳುತ್ತಿರುವ ಈ 'ಧ್ಯಾನ ಕಸ್ತೂರಿ'ಯು ಒಂದು ಹೊಸಯುಗದ ಆಧ್ಯಾತ್ಮಿಕ ಮಾಸ ಪತ್ರಿಕೆಯಾಗಿದೆ.

–ಸಂ.

# ಏಕತಾ ಧ್ಯಾನ

''ಏಕತಾ ಧ್ಯಾನ'' ಮಾಡಲು ಒಬ್ಬೊಬ್ಬರಿಗೂ ಮತ್ತು ಎಲ್ಲರಿಗೂ ಪತ್ರೀಜಿಯವರ ದಿವ್ಯ ಕರೆ
''ಏಕತೆಗಾಗಿ ಜೊತೆಗೂಡಿ ಬಂದು ಇಡೀ ಜಗತ್ತನ್ನು ಒಗ್ಗೂಡಿಸಿ ಎಂಬ ಒಂದು ಕರ್ತವ್ಯದ ಕರೆ''

''ಏಕತಾ ಧ್ಯಾನ'' ಎಂಬುದು ಒಂದು ''ಸಾಮೂಹಿಕ ಧ್ಯಾನ ಗೋಷ್ಠಿ''. ನಾವು ಎಲ್ಲಿದ್ದರೆ ಅಲ್ಲೇ.
ಒಂದೇ ಸಮಯದಲ್ಲಿ ಎಲ್ಲರೂ ಕುಳಿತು ಮಾಡುವ ಧ್ಯಾನವು ಎಲ್ಲರನ್ನೂ ಒಗ್ಗೂಡಿಸುತ್ತದೆ.

## "ಪ್ರತಿ ಭಾನುವಾರ ಬೆಳಗ್ಗೆ 6 ಗಂಟೆಯಿಂದ 7 ಗಂಟೆಯವರೆಗೆ"

ಒಂದು ಗಂಟೆಯ ಸಮಯವನ್ನು ಈ ಶ್ರೇಷ್ಠ 'ಏಕತಾ ಸಂಪರ್ಕ'ಕ್ಕಾಗಿ ಆಯ್ಕೆ ಮಾಡಲಾಗಿದೆ.
ಇದು ಜೂನ್1, 2008 ರಿಂದ ಆರಂಭಗೊಂಡು ಡಿಸೆಂಬರ್ 2012ರ ಅಂತ್ಯಕ್ಕೆ ಕೊನೆಗೊಳ್ಳುತ್ತದೆ.

ಶ್ರೇಷ್ಠ ಏಕತಾ ಭಾವದೊಂದಿಗೆ ''**ಧ್ಯಾನ ಜಗತ್**''ನ್ನು ಸಾಧಿಸೋಣ

## 2012ರ ಹೊತ್ತಿಗೆ ಇಡೀ ಜಗತ್ತನ್ನು ಆಧ್ಯಾತ್ಮೀಕರಿಸೋಣ !

ಅತ್ಯುತ್ತಮವಾದ ಚೈತನ್ಯವನ್ನು ಪಡೆಯಲು ಅನುವಾಗುವಂತೆ, ಬಿಡುವಿರದ ನಿಮ್ಮ ತರ್ಕಬುದ್ಧಿಯನ್ನು ಉಳ್ಳ ಮನಸ್ಸನ್ನು ''ಶಾಂತ'' ಗೊಳಿಸಬೇಕಾಗಿದೆ. ಸುತ್ತಲಿನ ಪ್ರತಿಯೊಬ್ಬರಲ್ಲಿಯೂ ಒಗ್ಗೂಡಿ ಒಂದಾಗಲು ನಮಗೆ ಇದು ಶಕ್ತಗೊಳಿಸುತ್ತದೆ !

''ಏಕತಾ ಧ್ಯಾನ ಯೋಜನೆ''ಯು ಇಡೀ ಜಗತ್ತಿನಾದ್ಯಂತ ವಿಸ್ತರಿಸಲೇಬೇಕು. ವಿಶ್ವಪ್ರಜ್ಞೆ ಮತ್ತು ಜಗತ್ತಿನ ಸಮನ್ವಯವನ್ನು
ಸಾಧ್ಯವಾದಷ್ಟು ಶೀಘ್ರವಾಗಿ ಜಗತ್ತಿನಾದ್ಯಂತ ಹರಡಿಸುವ ಘನ ಉದ್ದೇಶಕ್ಕಾಗಿ ನಾವೆಲ್ಲರೂ ಶ್ರಮಿಸೋಣ.
ಇಡೀ ಅಸ್ತಿತ್ವದ ಜೊತೆಯಲ್ಲಿ ನೀವೂ ಸಹ ಇರುವಿರಿ ಎಂದು ನೀವು ಭಾವಿಸಿದರೆ,
ಈ ಏಕತಾ ಧ್ಯಾನದಲ್ಲಿ ನೀವೂ ಸಹ ಒಬ್ಬ ಅಭ್ಯರ್ಥಿಯೇ ಹೌದು !

ಒಗ್ಗೂಡಿ ನಾವು ಧ್ಯಾನಕ್ಕೆ ಕುಳಿತುಕೊಳ್ಳೋಣ !
ಒಗ್ಗೂಡಿ ನಾವು ಧ್ಯಾನವನ್ನು ಮಾಡೋಣ !
ಒಗ್ಗೂಡಿ ನಾವು ವಿಕಾಸ ಮತ್ತು ಪ್ರಗತಿ ಸಾಧಿಸೋಣ !
ಒಗ್ಗೂಡಿ ನಾವು ಹೊಸ ಪೃಥ್ವಿಯನ್ನು ಸೃಷ್ಟಿಸೋಣ.

ನಮ್ಮದೇ ಆದ ವಿಶ್ವಶಕ್ತಿಯನ್ನು (ಕಾಸ್ಮಿಕ್ ಎನರ್ಜಿ) ಮತ್ತು ನಮ್ಮದೇ ''ವಿಶ್ವ- ಏಕತೆ'' ಯನ್ನು ಅನುಭವಿಸೋಣ. ಪರಸ್ಪರರಲ್ಲಿ ಪ್ರೀತಿಯ ಮತ್ತು ಪರಸ್ಪರರಲ್ಲಿನ ನಕ್ಷತ್ರ - ಸಮೂಹದ - ಬೆಳಕಿನ ಮಿತಿಯಿಲ್ಲದ ಹರಿವನ್ನು ಬಲಮಾಡಿಕೊಳ್ಳೋಣ.

## '' ನಿಮ್ಮ ಉಸಿರಿನೊಂದಿಗೇ ಇರಿ ''

# ಧ್ಯಾನದ ಪ್ರಕ್ರಿಯೆ !

ನಿಮ್ಮ ಕಣ್ಣುಗಳನ್ನು ಮುಚ್ಚಿ
ವಿಶ್ರಾಂತ ಸ್ಥಿತಿಗೆ ತಲುಪಲು ಎಷ್ಟು ಸಮಯ ಬೇಕೋ ಅಷ್ಟನ್ನೂ ತೆಗೆದುಕೊಳ್ಳಿ
ಮಾಂಸಖಂಡಗಳನ್ನು ಕದಲಿಸಿ
ಚಾಚಿರಿ ಮತ್ತು ಹಾಯಾಗಿರಿಸಿ
ಬೆನ್ನುಹುರಿ ಮತ್ತು ಕುತ್ತಿಗೆಗಳನ್ನು ಹಾಯೆನಿಸುವಂತೆ ವಿಶ್ರಾಂತಗೊಳಿಸಿ...
ಎಲ್ಲಿಯೂ ಬಿಗಿತ ಬೇಡ!
ಇಲ್ಲಿ ಎಲ್ಲಿಯೂ ಸಹ ಬಿಗಿತ ಇಲ್ಲ
ಕೇವಲ ವಿಶ್ರಾಂತ ಸ್ಥಿತಿ ಮಾತ್ರ, ಇದು ಶಾಂತತೆಯ ಆರಂಭ.... ಈಗ ಯಾವುದೇ ಆತುರ ಇಲ್ಲ
ಈಗ ಮಾಡಲು ಏನೂ ಕೆಲಸವಿಲ್ಲ. . .  ಅಥವಾ ಯಾವುದರ ಕುರಿತೂ ಆಲೋಚಿಸುವುದೂ ಸಹ ಬೇಡ...
ಕೇವಲ ವಿಶ್ರಾಂತಿ!
ಶ್ವಾಸವೇ ನೀವಾಗಿರಿ
ಮೃದುವಾಗಿ, ಸಲೀಸಾಗಿ ಉಸಿರನ್ನು ತೆಗೆದುಕೊಳ್ಳಿ
ಮೃದುವಾಗಿ, ಸಲೀಸಾಗಿ ಉಸಿರನ್ನು ಬಿಡಿ
ನಿಮ್ಮ ಉಸಿರು ಲಯಬದ್ಧವಾದ ಶಾಂತತೆಯಾಗಿರಲಿ, ನಿಮ್ಮ ಉಸಿರೇ ಶಾಂತತೆಯ ಲಯಬದ್ಧತೆ
ನಿಮ್ಮ ಉಸಿರನ್ನೇ ಅನುಸರಿಸಿ, ಶಾಂತವಾಗಿರಿ ನಿಮ್ಮ ಉಸಿರಿನೊಂದಿಗೇ ಇರಿ
ಉಸಿರು ಒಳಬರುತ್ತಿದೆ, ಹೊರಹೋಗುತ್ತಿದೆ.. . .  ಉಸಿರು.. ಒಳಗೆ... ಹೊರಗೆ. ಇದರಲ್ಲಿಯೇ ನಿಮ್ಮ ಮನಸ್ಸನ್ನು ತೊಡಗಿಸಿ.
ಅಷ್ಟೇ !
ಸ್ಥಿರವಾಗಿ ಇರಿ, ನಿಮ್ಮ ಉಸಿರಿನೊಂದಿಗೆ ಇರಿ
ನಿಮ್ಮ ಉಸಿರಿನ ಚೈತನ್ಯದೊಂದಿಗೇ ಇರಿ
ಆನಾಪಾನಸತಿ ಧ್ಯಾನವು ಇಷ್ಟು ಸರಳವಾದುದು. ತುಂಬಾ ತುಂಬಾ ಸುಲಭ  ಏನೇನೂ ಕಷ್ಟವಿಲ್ಲ !

ಧ್ಯಾನವನ್ನು ಯಾರಾದರೂ ಮಾಡಬಹುದು !
ಯಾವ ವಯಸ್ಸಿನವರಾದರೂ ಮಾಡಬಹುದು !
ಯಾವ ಸಮಯದಲ್ಲಿಯಾದರೂ ಮಾಡಬಹುದು!
ಯಾವ ಸ್ಥಳದಲ್ಲಿಯಾದರೂ ಮಾಡಬಹುದು.!

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು.. .. ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು.. ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು. ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ, ನಲವತ್ತು ನಿಮಿಷಗಳ ಕಾಲ, ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

ಆಧ್ಯಾತ್ಮಿಕ ಆರೋಗ್ಯವು ಬೇರು ಇದ್ದಂತೆ ಮತ್ತು ಭೌತಿಕ, ಶಾರೀರಿಕ ಆರೋಗ್ಯವು ಅದರ ಫಲ.
ಆನಾಪಾನಸತಿ ಧ್ಯಾನವು ಒಂದೇ ಒಬ್ಬ ವ್ಯಕ್ತಿಗೆ ಆಧ್ಯಾತ್ಮಿಕ ಆರೋಗ್ಯವನ್ನು ನೀಡಬಲ್ಲದು
ನಮ್ಮ ಪ್ರಯತ್ನಗಳ ಮೂಲಕ ನಮಗೆ ನಾವೇ ಕೊಟ್ಟುಕೊಳ್ಳುವ ಅತ್ಯುನ್ನತ ಕೊಡುಗೆ.

ಭೌತಿಕ ಶರೀರವು ತನ್ನದೇ ಆದ ಸಹಜವಾದ, ಸರಳವಾದ ಮತ್ತು ಲಯಬದ್ಧವಾದ ಉಸಿರಾಟವನ್ನು ಹೊಂದಿದೆ. ಧ್ಯಾನದಲ್ಲಿ – ಭೌತಿಕ ಶರೀರದ ಈ ಲಯಬದ್ಧವಾದ, ಸಹಜವಾದ, ಸಾಮಾನ್ಯ ಉಸಿರಾಟದಲ್ಲಿ ಮನಸ್ಸು ಸಂಪೂರ್ಣವಾಗಿ ತಲ್ಲೀನವಾಗಬೇಕು.